ಅಥವಾ ನನಗೆ ಗೊತ್ತಿರದ ಇನ್ನೊಂದು ಲೋಕವನ್ನು ಜಿಮ್ಮಿ ತೋರಿಸಿಬಿಡುತ್ತಾನೆನ್ನುವ ನಂಬಿಕೆ ಇರಬೇಕು. ಎಕ್ಸ್‌ಟ್ರಾ ಮಾರಿಟಲ್ ಅಫೇರ್ಸು... ಕಳ್ಳ ಸಂಬಂಧಗಳನ್ನು ಬಹಳ ನಾಜೂಕಾಗಿ ನಿಭಾಯಿಸಲು ಒದ್ದಾಡುವ ಗೆಳತಿಯರು – ಗೆಳೆಯರು, ಸಲಿಂಗ ಕಾಮಿಗಳು, ಲೆಸ್ಬಿಯನ್ಸು, ಲವ್ವು ಇಂಥ ವಿಷಯಗಳನ್ನು ಒಂದು ಹೆಣ್ಣು – ಗಂಡು ಕುಳಿತು ಮಾತಾಡಿಕೋಬೇಕಾದರೆ ಅವರು ಗೊತ್ತಿಲ್ಲದೇ ಹತ್ತಿರವಾಗುತ್ತಿದ್ದಾರೆ, ಇಲ್ಲ ಗೊತ್ತಿದ್ದೆ ಹತ್ತಿರವಾಗಲು ಹಾತೊರೆಯುತ್ತಿದ್ದಾರೆ ಅಥವಾ ಆ ಇಬ್ಬರಲ್ಲಿ ಇನ್ನೊಬ್ಬರು ಒಬ್ಬರನ್ನು ಬಲೆಗೆ ಬೀಳಿಸಿಕೊಳ್ಳುವ ಎಲ್ಲಾ ತಂತ್ರಗಾರಿಕೆಯನ್ನೂ ಬಳಸುತ್ತಿದ್ದಾರೆಂದೇ ಅರ್ಥ ಅಲ್ಲವಾ? ಆದರೆ, ಸತ್ಯ ಹೇಳುತ್ತೇನೆ, ನನಗೆ ಅವನಲ್ಲಿ ಯಾವ ಆಸಕ್ತಿಯೂ ಇದ್ದಿಲ್ಲ. ಅಳುಕಿತ್ತು ಒಳಗೆ ಎಂಥದ್ದೋ... ಈ ರೀತಿ ಮಾತಾಡಿ, ಮಾತಾಡಿ ಇಂಥ ರೋಚಕವಾದ ವಿಷಯಗಳನ್ನೇ ಹೇಳಿ ಹೇಳಿ ನನ್ನ ಬ್ರೈನ್ ವಾಶ್ ಮಾಡಿ ಕೊನೆಗೆ ನಾನೇ ಅವನ ಹಾಸಿಗೆಗೆ!... ಥೂ ಬೇಡವಪ್ಪಾ, ನನಗಂತೂ ಅವನ ಸಿಗರೇಟಿನ ಹೊಗೆಯೇ ಸೇರುವುದಿಲ್ಲ, ಹೊಟ್ಟೆ ತೊಳೆಸತೊಡಗುತ್ತದೆ. ಅಸಹ್ಯವಾಗಿಬಿಡುತ್ತದೆ. ದೂರ ಕುಳಿತರೂ ಅವನ ಬಾಯಿ ವಾಸನೆ ನನಗೆ ಸಹಿಸಲಾಗುವುದಿಲ್ಲ. ಕಾಫಿ ಮುಗಿದರೆ ಸಾಕು ಎಂದು ಎದ್ದುಬಿಡುತ್ತೇನೆ.

ಇವತ್ತು ಚಾಟ್ ಕಿಂಡಿಯಲ್ಲಿ ಕೂತಿದ್ದ ಜಿಮ್ಮಿ, ಅದೂ... ಇದೂ... ಆಂ... ಉಮ್... ಮಾತಾಡಿ ಒಮ್ಮೆಲೆ 'ನೀನು ಯಾವ ಬ್ರಾಂಡ್ ಲಿಂಗರಿ ಯೂಸ್ ಮಾಡ್ತೀಯಾ?' ಎಂದುಬಿಟ್ಟಾಗ ನಾನು ಗಾಬರಿಯಾದೆ. 'ನನಗೆ ಗೊತ್ತಿಲ್ಲ' ಎಂದು ಅದೆಲ್ಲ ಮಾತಾಡುವುದು ಬೇಡವೆಂದು ಹೇಳಿ ನನ್ನ ಕಿಟಕಿಮುಚ್ಚಿ ಹೊರಗೆ ಬಂದೆ. ನನ್ನ ಕಾಲದ ಯಾರೂ ಈ 'ಲಿಂಗರಿ' ಪದವನ್ನೇ ಕೇಳಿ ಗೊತ್ತಿಲ್ಲದವರು. ಸ್ಕೂಲು ಕಾಲೇಜಿನ ಅಂಡರ್ ವೇರ್, ಕಾಚಾ ಶಬ್ದಗಳು ಕೂಡ... ಮಾಲ್ ಮತ್ತು ಗೋಳೀಕರಣಗೊಂಡು ಯಾವಾಗ ಲಿಂಗರಿಗಳಾದವೋ ಗೊತ್ತಿಲ್ಲ. ಈ ವಿದೇಶಿಯರು ಇಂಥ ಬ್ರಾಂಡುಗಳ ರಾಶಿಯನ್ನು ಅಂತರ್ಜಾಲದಲ್ಲಿ ಹಾಕಿ, ಹುಚ್ಚು ಹಿಡಿಸಿ ಯಾಕೆ ತಲೆಕೆಡಿಸುತ್ತಾರೋ ಗೊತ್ತಿಲ್ಲ. ನಾನು ಯಾವುದಾದರೂ ಲಿಂಗರಿ ಹಾಕಿಕೊಳ್ಳಲಿ, ಇವನಿಗೇನಂತೆ! ಯಾಕೋ. ನಮ್ಮ ಆಫೀಸಿನ ನಾರದಮುನಿ ಬಿಂದುಸಾರಳಿಗೆ ಕೇಳೋಣವೆಂದುಕೊಂಡು ಸುಮ್ಮನಾದೆ. ಅವಳು ಇನ್ನಷ್ಟು ನನ್ನ ಜೀವ ತಿನ್ನುತ್ತಾಳೆ...

'ಸೊ ವಾಟ್? ಜಾಸ್ತಿಯೇನ್ಮಾಡಬಹುದು? ಲಿಂಗರಿ ಕೊಡಿಸ್ತಾನಾ? ತಕ್ಕೊಂಡು ಸುಮ್ಮನೇ ಬ್ಯಾಗಿಗೆ ಹಾಕ್ಕೊ, ಅಷ್ಟೇ! ಬರ್ತಿಯಾ ಮಲಗೋಕೆ – ಅಂದಾಗ ನೋಡೋಣವಂತೆ' ಎಂದಳು ಬಿಂದುಸಾರ. ಅವಳಿಗೆ ಇದೆಲ್ಲ ಚೇಷ್ಟೆಯೋ, ನಿಜಕ್ಕೂ ಅವಳಿರೋದೆ ಹೀಗೋ ಗೊತ್ತಿಲ್ಲ. ಇಷ್ಟು ನಿರಾಳವಾಗಿರಲು ಹೇಗೆ ಸಾಧ್ಯವಾಗುತ್ತದೆ ಇವಳಿಗೆ? ಬದುಕನ್ನು ಎಷ್ಟು ಸಲೀಸಾಗಿ ತಗೊಂಡುಬಿಡ್ತಾಳೆ ಅವಳು. ಗಂಡಸನ್ನೂ ಅದೇ ನವಿರಿನಲ್ಲಿ ಕುಣಿಸಿಬಿಡ್ತಾಳೆ.

ನಮ್ಮದೇ ಕಚೇರಿಯ ಫ್ರೆಂಚ್ ಅಧಿಕಾರಿಗಳನ್ನು ದಿಲ್ಲಿ ಸುತ್ತಾಡಿಸಿ, ಕುತುಬ್ ಮಿನಾರ್, ಇಂಡಿಯಾ ಗೇಟ್, ಹುಮಾಯೂನ್ ಗುಂಬಜ್ ಅಂತೆಲ್ಲ ಸುತ್ತಾಡಿಸಿ ಅದೇ ಸಂಜೆ ಡೈರೆಕ್ಟರುಗಳ ಜೊತೆಯಲ್ಲಿ ಪಂಚತಾರಾ ಹೋಟೆಲಿನಲ್ಲಿ ಕುಳಿತು ವೈನ್ ಹೀರಿ, ರಾತ್ರಿ ಯಾವಾಗಲೋ ಡ್ರೈವರ್ ಇವಳನ್ನು ಜಂಗಪುರಾದ ಅವಳ ಮನೆಗೆ ಬಿಟ್ಟುಕೊಟ್ಟಿದ್ದನ್ನು ಹೇಳುವಾಗ ನಾನು ಸುಮ್ಮನೇ ಲೆಟರ್ ಟೈಪಿಸುತ್ತ ಕೇಳಿಸಿಕೊಂಡಿದ್ದೆ. ಏನನ್ನೂ ಕೇಳಿರಲಿಲ್ಲ. ಕೇಳಿದರೂ ಬಿಂದುಸಾರ ನಿಜವನ್ನು ಹೇಳುವುದಿಲ್ಲವೆಂದು ಗೊತ್ತು ನನಗೆ. ಎಲ್ಲವನ್ನೂ ಗೋಲ್ ಗೋಲ್ ಘುಮಾಯಿಸಿಬಿಡುತ್ತಾಳೆ. ಅವರವರ ಖಾಸಗಿ ಮಾತು ತಗೊಂಡು ನಾನೇನು